FAX

**ಕರ್ನಾಟಕ ಸರ್ಕಾರ**

ಸಂಖ್ಯೆ:ಸಿಆಸುಇ:184: ಆರ್‌ಟಿಐ:2015

ಕರ್ನಾಟಕ ಸರ್ಕಾರದ ಸಚಿವಾಲಯ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಜನಸ್ಪಂದನ)
3ನೇ ಮಹಡಿ, ಪೋಡಿಯಂ ಬ್ಲಾಕ್,
ವಿಶ್ವೇಶ್ವರಯ್ಯ ಮುಖ್ಯ ಗೋಪುರ,
ಬೆಂಗಳೂರು, ದಿನಾಂಕ: 10.12.2015.

**ಸುತ್ತೋಲೆ**

ವಿಷಯ: ಮಾಹಿತಿ ಹಕ್ಕು ಅಧಿನಿಯಮ, 2005ರ ಕಲಂ 19(1)ರಡಿ ಸಲ್ಲಿಸಿದ ಮೊದಲ ಮೇಲ್ಮನವಿಗಳ ವಿಲೇ ಕುರಿತು

ಉಲ್ಲೇಖ:
1. ಸುತ್ತೋಲೆ ಸಂ: ಸಿಆಸುಇ 116 ಆರ್‌ಟಿಐ 2009, ದಿ: 07.07.2010
2. ಸುತ್ತೋಲೆ ಸಂ: ಸಿಆಸುಇ 71 ಆರ್‌ಟಿಐ 2012, ದಿ: 29.06.2012
3. ಸುತ್ತೋಲೆ ಸಂ: ಸಿಆಸುಇ 92 ಆರ್‌ಟಿಐ 2012, ದಿ:25.08.2012
4. ಸುತ್ತೋಲೆ ಸಂ: ಸಿಆಸುಇ 115 ಆರ್‌ಟಿಐ 2015, ದಿ: 13.08.2015

----0----

ಕರ್ನಾಟಕ ಮಾಹಿತಿ ಆಯೋಗವು ತನ್ನ ಮುಂದೆ ದಾಖಲಾಗಿದ್ದ ಪ್ರಕರಣ ಸಂಖ್ಯೆ: ಕೆಐಸಿ 3131 ಎಪಿಎಲ್ 2015ರಲ್ಲಿ [ಶ್ರೀ ವಿನ್ಸೆಂಟ್ ವಿರುದ್ಧ ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಡೆಪ್ಯೂಟಿ ರಿಜಿಸ್ಟ್ರಾರ್(ಮೌಲ್ಯಮಾಪನ), ಬೆಂಗಳೂರು ವಿಶ್ವವಿದ್ಯಾಲಯ] ದಿನಾಂಕ 05.10.2015ರಂದು ನೀಡಿದ ಆದೇಶದಲ್ಲಿ (ಪ್ರತಿ ಲಗತ್ತಿಸಿದೆ) ಮಾಹಿತಿ ಹಕ್ಕು ಅಧಿನಿಯಮ, 2005ರ ಪ್ರಕರಣ 19(1)ರ ಮೇರೆಗೆ ಮೊದಲ ಮೇಲ್ಮನವಿ ಪ್ರಾಧಿಕಾರಗಳು ನಿಗದಿತ ಅವಧಿಯಲ್ಲಿ ಮೊದಲ ಮೇಲ್ಮನವಿಗಳನ್ನು ವಿಲೇಗೊಳಿಸುತ್ತಿಲ್ಲವೆಂದು ಆಕ್ಷೇಪ ವ್ಯಕ್ತಪಡಿಸಿ ಈ ಬಗ್ಗೆ ಸರ್ಕಾರಕ್ಕೆ ಸುತ್ತೋಲೆ ಹೊರಡಿಸುವಂತೆ ಸೂಚನೆ ಹೊರಡಿಸಿರುತ್ತದೆ.

ಮಾಹಿತಿ ಹಕ್ಕು ಅಧಿನಿಯಮ, 2005ರ ಪ್ರಕರಣ 19(1)ರ ಮೇರೆಗೆ ಸಾರ್ವಜನಿಕ ಮಾಹಿತಿ ಅಧಿಕಾರಿಯ ವಿರುದ್ಧ ಅರ್ಜಿದಾರರು ಸಲ್ಲಿಸಿದ ಪ್ರಥಮ ಮೇಲ್ಮನವಿಯನ್ನು ಸ್ವೀಕರಿಸಿದ ನಂತರ ಮೇಲ್ಮನವಿದಾರರಿಗೆ ತಿಳುವಳಿಕೆ ನೀಡಿ ಅವರ ಅಹವಾಲುಗಳನ್ನು ಕೇಳಿ ಅದಕ್ಕೆ ಅನುಗುಣವಾಗಿ ನಿಯಮಾನುಸಾರ ಪರಿಶೀಲನೆ ಮಾಡಿ 45 ದಿನಗಳೊಳಗಾಗಿ ಪ್ರಕರಣವನ್ನು ಮುಕ್ತಾಯಗೊಳಿಸಿ ಆದೇಶ ಹೊರಡಿಸುವುದು ಕಡ್ಡಾಯವಾಗಿದ್ದು ಅದರಂತೆ ಎಲ್ಲ ಮೊದಲ ಮೇಲ್ಮನವಿ ಪ್ರಾಧಿಕಾರಗಳು ಉಲ್ಲೇಖಿತ ಸರ್ಕಾರದ ಸುತ್ತೋಲೆಗಳಲ್ಲಿ ನೀಡಿರುವ ನಿರ್ದೇಶನಗಳನ್ನು ಪಾಲಿಸುವಂತೆ ತಮ್ಮ ಆಡಳಿತದ ಅಧೀನದಲ್ಲಿ ಬರುವ ಎಲ್ಲ ಸಾರ್ವಜನಿಕ ಪ್ರಾಧಿಕಾರಗಳಿಗೆ ಸೂಚಿಸುವುದು.

(ಪರಮೇಶ್ ಪಾಂಡೆ)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ.
(ಜನಸ್ಪಂದನ).

ಇವರಿಗೆ,
ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು

Office work\Right to information-2015\circulars